ಸೀಟಿನಲ್ಲಿದ್ದ ಭಾರ ಚೀಲವನ್ನು ಹೆಗಲಿಗೇರಿಸಿಕೊಂಡು ಕೈಗಡಿಯಾರ ನೋಡಿದೆ. ಅಂದು ಮಾರ್ಚ್ 14, ಆ ಕ್ಷಣಕ್ಕೆ ಹೊಳೆದ ಮಾತನ್ನು ಹೇಳಿಬಿಟ್ಟೆ, 'ಸೆಪ್ಟೆಂಬರ್ 14 ಅದೇ ಹೋಟೆಲಿಗೆ ಬರುತ್ತೇನೆ, ನೀನು ಬಂದರೂ, ಬರದಿದ್ದರೂ ಅಲ್ಲಿ ಒಂದು ದಿನ ನಿಲ್ಲುತ್ತೇನೆ,' ಅವನ ಉತ್ತರ ಕೇಳಲೂ ಹೆದರಿಕೆಯಾಯಿತೋ ಅಥವಾ ಅವನು ಯೋಚಿಸಲೆಂದು ಹಾಗೆ ಮಾಡಿದೆನೋ ಆಮೇಲೆ ಒಂದು ಕ್ಷಣ ನಿಲ್ಲದೆ ನಡೆದುಬಿಟ್ಟೆ. ಗಟ್ಟಿ ಮನಸ್ಸು ಮಾಡಿ ಹಿಂದಿರುಗಿ ನೋಡದೆ ಇಟ್ಟ ಆ ಹೆಜ್ಜೆಗಳಲ್ಲಿ ನನ್ನ ಜೀವನದ ಅತಿ ದೀರ್ಘ ಮತ್ತು ದುರ್ಗಮ ಪಯಣವಿತ್ತು.

ಫ್ಲೈಟಿನಲ್ಲಿ ಕುಳಿತಾಗಲೇ ಸೆಪ್ಟೆಂಬರ್ 14ನ್ನು ಮೊಬೈಲ್‌ನಲ್ಲಿ ಮಾರ್ಕ್ ಮಾಡಿಕೊಂಡೆ. ಅಲ್ಲಿಂದ ಪ್ರತಿ ದಿನ, ದಿನಕ್ಕೆ ಹತ್ತುಸಲ ತಾರೀಖನ್ನು ನೋಡುತ್ತಿದ್ದೆ. ಉಹೂ ನಾನು ಮಾಡಿದ್ದು ತಪ್ಪೆಂದು ನನಗೆ ಯಾವತ್ತೂ ಅನ್ನಿಸಲಿಲ್ಲ. 'ಎಲ್ಲರ ಖುಷಿಗೂ ಅಂತರ ಒಂದೇ ಒಂದು ಹೆಜ್ಜೆ ಬಾಕಿ, ಎಲ್ಲ ಮನೆಗಳಲ್ಲೂ ಕಡಿಮೆ ಬೀಳುತ್ತದೆ ಒಂದೇ ಒಂದು ಕೋಣೆ' ಜಾವಿದ್ ಅಖ್ತರ್ ಸಾಲು ನೆನಪಾಯ್ತು. ಅವನು ನನ್ನ ಆ ಒಂದು ಹೆಜ್ಜೆ, ಆ ಒಂದು ಕೋಣೆ. ಹಾಗೆ ಬಂದ ಬಳಿಕ ಆಗಸ್ಟ್ ಹದಿನೈದರಿಂದ ಉಲ್ಟಾ ಎಣಿಸುವಿಕೆ ಶುರು, 30 ದಿನ, 29 ದಿನ, ಸಂಖ್ಯೆಗಳೆಂದರೆ ಕಣ್ಣಕೊನೆಯಿಂದಲೇ ಉದುರಿಸಿಬಿಡುವ ನಾನು ಆ ಒಂದು ಲೆಕ್ಕಾಚಾರವನ್ನು ಎಂದೂ ತಪ್ಪುತ್ತಿರಲಿಲ್ಲ. ಆದರೆ, ಇನ್ನೊಂದು ವಾರವಿರುವಾಗ ಆತಂಕ ಶುರುವಾಯಿತು, ನಾನು ಸೆಪ್ಟೆಂಬರ್ 14 ಎಂದು ಹೇಳಿದ್ದು ಹೌದು, ಆದರೆ ಅವನು ಹೂ ಅಂದನಾ, ತಲೆಯಾದರೂ ಆಡಿಸಿದನಾ? ಅವನ ಪಾಲಿಗೆ ಅದು ಪ್ರವಾಸದಲ್ಲೆಲ್ಲೋ ಸಿಕ್ಕ ಕ್ಷಣಮಾತ್ರದ ಅನುಭೂತಿ ಮಾತ್ರ ಆಗಿದ್ದರೆ? ನಿಜಕ್ಕೂ ಬಂದಾನಾ? ನಾನು ಹೋಗುವುದಾ? ಬಾರದಿದ್ದರೆ ಆಗುವ ನಿರಾಸೆಯನ್ನು ತಾಳಬಲ್ಲೆನೆ? ಆದರೆ, ಸೆಪ್ಟೆಂಬರ್ 14ರ ಮುಂಜಾನೆ ನಾನು ಏರ್‌ಪೋರ್ಟಿನಲ್ಲಿದ್ದೆ, ಮಧ್ಯಾಹ್ನ 12ಕ್ಕೆ ಮೌಂಟ್ ಅಬೂದ ಅದೇ ಹೋಟೆಲಿನಲ್ಲಿ, ಅದೇ ಕೋಣೆಯಲ್ಲಿದ್ದೆ. ಮಧ್ಯಾಹ್ನ 12.05ಕ್ಕೆ ಕೋಣೆಯ ಬೆಲ್ ಸದ್ದಾಯಿತು. ಅವನು ಬಂದಿದ್ದ. ಆರು ತಿಂಗಳ ದೂರ ಮತ್ತು ಕ್ಷಣವೂ ಮರೆಯಾಗದ ಸಾಂಗತ್ಯ ಎರಡನ್ನೂ ಒಂದು ಬಿಗಿಅಪ್ಪುಗೆ ಹಾಗೆ ಹೇಳಬಹುದೆ? ಮತ್ತೆ ಕುಳಿತು ನಮ್ಮ ಹಳೆಯ ಒಪ್ಪಂದವನ್ನು ನವೀಕರಿಸಿಕೊಂಡೆವು, ಆರು ತಿಂಗಳಿಗೊಮ್ಮೆ ಬರುವ ಈ ಒಂದು ಭೇಟಿ ನಮ್ಮ ಶಕ್ತಿಯಾಗಬೇಕು, ದೌರ್ಬಲ್ಯವಾಗಬಾರದು. ಇದರಿಂದ ನಮ್ಮ ಬದುಕಿಗೆ ಸಂಬಂಧಪಟ್ಟ ಇನ್ನ್ಯಾರಿಗೂ ನೋವು ಕೊಡಬಾರದು, ನಾವು ಜಗತ್ತಿನ ಮಾತೆಲ್ಲವನ್ನೂ ಆಡಬಹುದು ಆದರೆ ನಮ್ಮ ನಮ್ಮ ವೈಯಕ್ತಿಕ ಬದುಕಿನ ಬಗ್ಗೆ ಮಾತನಾಡುವಂತಿಲ್ಲ. ಅಷ್ಟು ಸುಲಭವೆ ಭಾವನೆಗಳಿಗೆ ಬೇಲಿ ಹಾಕುವುದು? ಈ ಹತ್ತು ವರ್ಷಗಳಲ್ಲಿ ಹಲವು ಹೊಸ ಒಪ್ಪಂದಗಳನ್ನು ಮಾಡಿಕೊಂಡಿದ್ದೇವೆ, ಅಯಾಚಿತವಾಗಿ ಕೆಲವನ್ನು ಮುರಿದಿದ್ದೇವೆ. ಹೇಳಿಕೊಂಡಿದ್ದೇವೆ, ಕೇಳಿದ್ದೇವೆ. ಆದರೆ, ಆರು ತಿಂಗಳಿಗೊಮ್ಮೆಗಿನ ಈ ಭೇಟಿಯಾಚೆಗೆ ಒಬ್ಬರನ್ನೊಬ್ಬರು ಎಂದೂ ಸಂಪರ್ಕಿಸಲು ಪ್ರಯತ್ನಿಸಿಲ್ಲ, ಅದಕ್ಕೆ ಬೇಕಾದ ಯಾವುದೇ ಸೇತುವೆಗಳನ್ನು ಕಟ್ಟಿಕೊಂಡಿಲ್ಲ.

ಹತ್ತು ವರ್ಷಗಳು... ಹತ್ತೊಂಬತ್ತು

